# ದಿನನಿತ್ಯದ ಬಳಕೆ

ಶ್ರೆಡರ್ · ಪ್ರಮಾಣಿತ ಕಾರ್ಯಾಚರಣಾ ವಿಧಾನ (SOP)



**1 ತ್ಯಾಜ್ಯವನ್ನು ವಿಂಗಡಿಸಿ.**

ಪ್ಲಾಸ್ಟಿಕ್, ಗಾಜು, ಲೋಹ ಮತ್ತು ಆಹಾರವಲ್ಲದ ಎಲ್ಲವನ್ನೂ ತೆಗೆಯಿರಿ.



**2 ದೊಡ್ಡ ಅಥವಾ ಗಟ್ಟಿಯಾದ ತುಂಡುಗಳನ್ನು ಚಿಕ್ಕದು ಮಾಡಿ.**

ಇಡೀ ತೆಂಗಿನಕಾಯಿ, ದೊಡ್ಡ ಮೂಳೆ ಮತ್ತು ದಪ್ಪ ಕಾಂಡಗಳು ಬ್ಲೇಡ್‌ಗಳನ್ನು ಜಾಮ್ ಮಾಡಬಹುದು.



**3 ಹಾಪರ್‌ನ ಬದಿಯಲ್ಲಿ ನಿಲ್ಲಿ.**

ಅದರ ಎದುರು ಎಂದಿಗೂ ನಿಲ್ಲಬೇಡಿ.




**4 ಒಮ್ಮೆಗೆ ಗರಿಷ್ಠ 5 ಕೆ.ಜಿ. ಮಾತ್ರ, ಸ್ವಲ್ಪ-ಸ್ವಲ್ಪವಾಗಿ ಹಾಕಿ.**

ಇಡೀ ಟ್ರೇ ಒಮ್ಮೆಲೇ ಸುರಿಯಬೇಡಿ. ಹೆಚ್ಚು ಹಾಕಿದರೆ ಶ್ರೆಡರ್ ಜಾಮ್ ಆಗುತ್ತದೆ.

⚠ **ಬ್ಲೇಡ್‌ಗಳು ತಿರುಗುವಾಗ ಕೈಗಳನ್ನು ಹಾಪರ್ ಒಳಗೆ ಎಂದಿಗೂ ಹಾಕಬೇಡಿ.**



**5 ಹಾಪರ್ ಖಾಲಿಯಾಗುವವರೆಗೆ ಕಾಯಿರಿ. ನಂತರ ಮುಂದಿನ 5 ಕೆ.ಜಿ. ಹಾಕಿ.**



**6 ಜಾಮ್ ಆಯಿತೇ? ರಿವರ್ಸ್ ಒತ್ತಿ.**

ನಂತರ ಮತ್ತೆ ಮುಂದಕ್ಕೆ ಚಲಾಯಿಸಿ. ಇನ್ನೂ ಸಿಕ್ಕಿದೆಯೇ? ತ್ವರಿತ ಪರಿಹಾರ ನೋಡಿ.




**7** **ಕ್ರೇಟ್ ತುಂಬುತ್ತಾ ಬಂತೇ? ಆಫ್ ಮಾಡಿ, ನಂತರ ಬದಲಿಸಿ.**
ತುಂಬಿ ಚೆಲ್ಲಲು ಬಿಡಬೇಡಿ.




**8** **ಮುಗಿದ ಮೇಲೆ ಆಫ್ ಮಾಡಿ.**
ಬ್ಲೇಡ್‌ಗಳು ಸಂಪೂರ್ಣ ನಿಲ್ಲುವವರೆಗೆ ಕಾಯಿರಿ.



**9** **ಚೂರು ಮಾಡಿದ ತ್ಯಾಜ್ಯವನ್ನು ಕಾಂಪೋಸ್ಟರ್ ಅಥವಾ ಗುಂಡಿಗೆ ತೆಗೆದುಕೊಂಡು ಹೋಗಿ.**



**10** **ಈಗಲೇ, ಒದ್ದೆಯಿರುವಾಗಲೇ ಬ್ಲೇಡ್‌ಗಳನ್ನು ತೊಳೆಯಿರಿ.**
ಸ್ವಚ್ಛತೆ ಮತ್ತು ಆರೈಕೆ ನೋಡಿ.

## ಏನು ಹಾಕಬೇಕು

### ✓ ಹಾಕಿ

**ಎಲ್ಲಾ ಆಹಾರ ತ್ಯಾಜ್ಯ**
ಹಣ್ಣು, ತರಕಾರಿ, ಮಾಂಸ, ಕೋಳಿ, ಮೀನು, ಚಿಪ್ಪುಗಳು, ಮೂಳೆಗಳು, ಪಾಸ್ತಾ, ಬೇಕರಿ ಪದಾರ್ಥಗಳು, ಚೀಸ್ ಮತ್ತು ಮೊಟ್ಟೆ ಸಿಪ್ಪೆ.

**ಆಹಾರ ಅಂಟಿದ ಕಾಗದ**
ನ್ಯಾಪ್ಕಿನ್, ಪೇಪರ್ ಟವೆಲ್, ಟೀ ಬ್ಯಾಗ್ ಮತ್ತು ಕಾಫಿ ಪುಡಿ.

**ಸಸ್ಯಗಳು**
ಹೂವುಗಳು, ಎಲೆಗಳು, ಹುಲ್ಲು ಮತ್ತು ಸಣ್ಣ ಕೊಂಬೆಗಳು.

**ಪ್ರಮಾಣೀಕೃತ ಕಾಂಪೋಸ್ಟ್ ಆಗುವ ವಸ್ತುಗಳು**
ಕಾಂಪೋಸ್ಟ್ ಆಗುವ ಚೀಲಗಳು (ASTM D6400), ಮರದ ಕಡ್ಡಿಗಳು ಮತ್ತು ಚಾಪ್‌ಸ್ಟಿಕ್‌ಗಳು.

### ✕ ಹಾಕಬೇಡಿ

- ✕ ದ್ರವಗಳು, ಗ್ರೀಸ್ ಮತ್ತು ಅಡುಗೆ ಎಣ್ಣೆ
- ✕ ಪ್ಲಾಸ್ಟಿಕ್, ಥರ್ಮಾಕೋಲ್, ಪಾರ್ಸೆಲ್ ಡಬ್ಬಿಗಳು ಮತ್ತು ಬಳಸಿ ಎಸೆಯುವ ಕಪ್‌ಗಳು
- ✕ ಗಾಜು ಮತ್ತು ಲೋಹ
- ✕ ಮೇಣದ ಕಾಗದ ಮತ್ತು ಮೇಣ ಲೇಪಿತ ರಟ್ಟು
- ✕ ರಬ್ಬರ್ ಬ್ಯಾಂಡ್, ತಂತಿ ಕಟ್ಟು ಮತ್ತು ಸ್ಟಿಕ್ಕರ್‌ಗಳು
- ✕ ಡಯಾಪರ್‌ಗಳು
- ✕ ಪ್ರಮಾಣೀಕೃತವಲ್ಲದ 'ಜೈವಿಕ ವಿಘಟನೀಯ' ವಸ್ತುಗಳು

⚠ **ಕಂಟ್ರೋಲ್ ಪ್ಯಾನೆಲ್ ತೆರೆಯಬೇಡಿ ಅಥವಾ ವೈರಿಂಗ್ ಮುಟ್ಟಬೇಡಿ. ವಿದ್ಯುತ್ ಆಘಾತವಾದರೆ ತಕ್ಷಣ ಮುಖ್ಯ MCB ಆಫ್ ಮಾಡಿ ನಮಗೆ ಕರೆ ಮಾಡಿ.**